ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-02-1993.

# *ಬ್ರಾಹ್ಮಣ ಜೀವನದ ಶ್ವಾಸ - ಉತ್ಸಾಹ-ಉಲ್ಲಾಸಗಳು*

(ब्राहमण जीवन का श्वांस-सदा उमंग और उत्साह)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಮಕ್ಕಳೆಲ್ಲರಿಗೂ ಶಿವ ಜಯಂತಿಯ ಶುಭಾಶಯಗಳನ್ನು ಕೊಡುತ್ತಾ ಅವ್ಯಕ್ತ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ತ್ರಿಮೂರ್ತಿ ಶಿವ ತಂದೆ ಸರ್ವ ಮಕ್ಕಳನ್ನು ವಿಶೇಷ ಮೂರು ಸಂಬಂಧದಲ್ಲಿ ನೋಡುತ್ತಿದ್ದಾರೆ. ಎಲ್ಲದಕ್ಕಿಂತ ಮೊದಲ ಪ್ರಿಯ ಸಂಬಂಧವಾಗಿದೆ ಸರ್ವ ಪ್ರಾಪ್ತಿಗಳ ಮಾಲೀಕರು, ವಾರಸುದಾರರಾಗಿದ್ದೀರಿ ವಾರಸುದಾರರ ಜೊತೆ ಈಶ್ವರೀಯ ವಿದ್ಯಾರ್ಥಿಗಳಾಗಿದ್ದೀರಿ. ಜೊತೆ-ಜೊತೆ ಪ್ರತೀ ಹೆಜ್ಜೆಯಲ್ಲಿ ಫಾಲೊ ಮಾಡುವಂತಹ ಸದ್ಗುರುವಿಗೆ ಪ್ರಿಯರಾಗಿರುವಿರಿ. ತ್ರಿಮೂರ್ತಿ ಶಿವ ತಂದೆಯು ಮಕ್ಕಳೊಂದಿಗೂ ಸಹ ಮೂರು ಸಂಬಂಧಗಳನ್ನು ವಿಶೇಷ ರೂಪದಲ್ಲಿ ನೋಡುತ್ತಿದ್ದಾರೆ. ಅಂತೂ ಸರ್ವ ಸಂಬಂಧವನ್ನು ನಿಭಾಯಿಸವಂತಹ ಅನುಭವೀ ಅತ್ಮರಾಗಿರುವಿರಿ ಆದರೆ ಇಂದು ವಿಶೇಷ ಮೂರು ಸಂಬಂಧಗಳನ್ನು ನೋಡುತ್ತಿದ್ದಾರೆ. ಈ ಮೂರೂ ಸಂಬಂಧಗಳು ಎಲ್ಲರಿಗೂ ಪ್ರಿಯವಾಗಿವೆ. ಇಂದು ವಿಶೇಷ 'ತ್ರಿಮೂರ್ತಿ ಶಿವಜಯಂತಿ' ಆಚರಿಸುವಂತಹ ಉಮ್ಮಂಗದಲ್ಲಿ ಎಲ್ಲರೂ ಓಡೋಡಿ ಬಂದು ತಲುಪಿದ್ದೀರಿ. ತಂದೆಗೆ

ಶುಭಾಶಯಗಳನ್ನು ಕೊಡಲು ಬಂದಿದ್ದೀರಾ ಅಥವಾ ತಂದೆಯಿಂದ ಶುಭಾಶಯಗಳನ್ನು ತೆಗೆದುಕೊಳ್ಳಲು ಬಂದಿರುವಿರಾ? ಎರಡು ಕಾರ್ಯಗಳನ್ನು ಮಾಡಲು ಬಂದಿರುವಿರಿ. ಹೆಸರೇ ಆಗಿದೆ ಶಿವ ಜಯಂತಿ ಅಥವಾ ಶಿವರಾತ್ರಿ. ಅಂದ ಮೇಲೆ ತ್ರಿಮೂರ್ತಿ ಏನನ್ನು ಸಿದ್ಧ ಮಾಡುತ್ತದೆ? ಪ್ರಜಾಪಿತಾ ಬ್ರಹ್ಮಾರವರ ಮುಖಾಂತರ ಏನು ಮಾಡುವಿರಿ? ತಾವು ಬ್ರಾಹ್ಮಣರ ರಚನೆ ರಚಿಸುತ್ತೀರಿ. ನಂತರ ಅವರ ಪಾಲನೆಯಾಗುತ್ತದೆ. ತ್ರಿಮೂರ್ತಿ ಶಬ್ಧ ತಂದೆಯ ಜೊತೆ-ಜೊತೆ ತಾವು ಬ್ರಾಹ್ಮಣ ಮಕ್ಕಳೂ ಸಹ ಜೊತೆಯಿದ್ದೀರಿ ಎಂದು ಸಿದ್ದ ಮಾಡುತ್ತದೆ. ಒಬ್ಬರೇ ತಂದೆ ಏನು ಮಾಡುತ್ತಾರೆ. ಆದ್ದರಿಂದ ತಂದೆಯ ಜಯಂತಿ ಅರ್ಥಾಥ್ ತಾವು ಬ್ರಾಹ್ಮಣ ಮಕ್ಕಳ ಜಯಂತಿಯೂ ಸಹ ಆಗಿದೆ. ತಂದೆ ಮತ್ತು ಮಕ್ಕಳ ಈ ಅಲೌಕಿಕ ದಿವ್ಯ ಜನ್ಮದ ಅಥವಾ ಈ ಡೈಮಂಡ್ ಜಯಂತಿಯ ಪದಮಾಪದಮದಷ್ಟು ಶುಭಾಷಯವನ್ನು ಕೊಡುತ್ತಿದ್ದಾರೆ. ತಮ್ಮೆಲ್ಲರ ಶುಭಾಷಯಗಳ ಪತ್ರ, ಕಾರ್ಡ್ ತಂದೆಯ ಹತ್ತಿರ ತಲುಪಿದೆ ಹಾಗೂ ಈಗಲೂ ಸಹ ಕೆಲವು ಮಕ್ಕಳು ಹೃದಯದಿಂದ ಶುಭಾಷಯದ ಗೀತೆಯನ್ನು ಹಾಡುತ್ತಿದ್ದಾರೆ- ದೂರವಿರಲಿ ಅಥವಾ ಸನ್ಮುಖದಲ್ಲಿರಲಿ. ದೂರದಲ್ಲಿರುವವರ ಶುಭಾಷಯದ ಗೀತೆಯೂ ಸಹ ಕಿವಿಯಲ್ಲಿ ಕೇಳಿಸುತ್ತಿದೆ. ರಿಟರ್ನನಲ್ಲಿ ಬಾಪ್‌ದಾದಾರವರು ದೇಶ-ವಿದೇಶದ ಸರ್ವ ಮಕ್ಕಳಿಗೆ ಪದಮಾಪದಮ್ ಶುಭಾಷಯಗಳನ್ನು ಕೊಡುತ್ತಿದ್ದಾರೆ.

ಬ್ರಾಹ್ಮಣ ಜೀವನದಲ್ಲಿ ಯಾವುದೇ ಉತ್ಸವವನ್ನು ಆಚರಿಸುವುದು ಅರ್ಥಾತ್ ಸದಾ ಉತ್ಸಾಹ ಉಲ್ಲಾಸದ ಜೀವನವನ್ನು ತಯಾರು ಮಾಡಿಕೊಳ್ಳುವುದು ಎಂದು ಎಲ್ಲಾ ಮಕ್ಕಳು ತಿಳಿದುಕೊಂಡೆ ಇದ್ದೀರಿ. ಬ್ರಾಹ್ಮಣ ಅಲೌಕಿಕ ಡಿಕ್ಷನರಿಯಲ್ಲಿ ಆಚರಿಸುವುದರ ಅರ್ಥ ತಯಾರಾಗುವುದಾಗಿದೆ. ಕೇವಲ ಇಂದು ಉತ್ಸವವನ್ನು ಆಚರಿಸುತ್ತಿದ್ದೀರಾ ಅಥವಾ ಸದಾ ಉತ್ಸಾಹ ತುಂಬಿದ ಜೀವನವನ್ನು ತಯಾರು ಮಾಡಿಕೊಳ್ಳುತ್ತೀರಾ? ಹೇಗೆ ಈ ಸ್ಥೂಲ ಶರೀರದಲ್ಲಿ ಶ್ವಾಸವಿದ್ದರೆ ಜೀವನವಿದೆ. ಒಂದುವೇಳೆ ಶ್ವಾಸ ಸಮಾಪ್ತಿಯಾದರೆ ಜೀವನವೇ ಸಮಾಪ್ತಿಯಾಗುತ್ತದೆಯೋ  ಹಾಗೇಯೇ ಬ್ರಾಹ್ಮಣ ಜೀವನದ ಶ್ವಾಸವಾಗಿದೆ- ಸದಾ ಉತ್ಸಾಹ ಉಲ್ಲಾಸ, ಬ್ರಾಹ್ಮಣ ಜೀವನದಲ್ಲಿ ಪ್ರತೀ ಸೆಕೆಂಡ್ ಉತ್ಸಾಹ ಉಲ್ಲಾಸವಿಲ್ಲದಿದ್ದರೆ ಅದು ಬ್ರಾಹ್ಮಣ ಜೀವನವಲ್ಲ, ಶ್ವಾಸದ ಗತಿಯೂ ಸಹ ನಾರ್ಮಲ್ (ಸಾಮಾನ್ಯ) ಆಗಿರಬೇಕು. ಒಂದುವೇಳೆ ಶ್ವಾಸದ ಗತಿ ಬಹಳ ತೀವ್ರವಾದರೂ ಸಹ ಜೀವನ ಯಥಾರ್ಥವಲ್ಲ ಹಾಗು ನಿಧಾನವಾದರೂ ಯಥಾರ್ಥ ಜೀವನವೆಂದು ಹೇಳಲಾಗುವುದಿಲ್ಲ. ಹೈ ಪ್ರೆಶರ್ ಅಥವಾ ಲೊ ಪ್ರೆಶರ್ ಆಗಿಬಿಡುತ್ತದೆ ಅಲ್ಲದೆ. ಇದಕ್ಕೇ ನಾರ್ಮಲ್ ಜೀವನವೆಂದು ಹೇಳಲಾಗುವುದಿಲ್ಲ. ಹಾಗಾಗಿ ಇವುಗಳನ್ನು ಚೆಕ್ ಮಾಡಿಕೊಳ್ಳಿ - 'ನನ್ನ ಬ್ರಾಹ್ಮಣ ಜೀವನದಲ್ಲಿ ಉತ್ಸಾಹ ಉಲ್ಲಾಸದ ಗತಿ ನಾರ್ಮಲ್ ಆಗಿದೆಯಾ? ಅಥವಾ ಕೆಲವೊಮ್ಮೆ ಬಹಳ ತೀವ್ರ ಇನ್ನು ಕೆಲವೊಮ್ಮೆ ಬಹಳ ನಿಧಾನವಾಗುತ್ತದೆಯೆ? ಏಕರಸವಾಗಿರುತ್ತದೆಯೇ? ಏಕರಸವಾಗಿರಬೇಕಲ್ಲವೇ. ಕೆಲವೊಮ್ಮೆ ಬಹಳ ಇನ್ನು ಕೆಲವೊಮ್ಮೆ ಕಡಿಮೆ ಇದು ಒಳ್ಳೆಯದಲ್ಲ ಅಲ್ಲವೇ. ಆದ್ದರಿಂದ ಸಂಗಮಯುಗದ ಪ್ರತೀ ಘಳಿಗೆ ಉತ್ಸವವಾಗಿದೆ.  ಇದಂತೂ ವಿಶೇಷ ಮನೋರಂಜನೆಗಾಗಿ ಆಚರಿಸುತ್ತಾರೆ. ಏಕೆಂದರೆ ಬ್ರಾಹ್ಮಣ ಜೀವನದಲ್ಲಿ ಮತ್ತೆಲ್ಲಿಗೆ ಹೋಗಿ ಮನೋರಂಜನೆಯನ್ನು ಆಚರಿಸುವಿರಿ? ಇಲ್ಲೇ ಆಚರಿಸುತ್ತೀರಲ್ಲವೇ. ಎಲ್ಲಾ ವಿಶೇಷ ಸಾಗರದ ದಡದಲ್ಲಿ ಅಥವಾ ಹೂದೋಟದಲ್ಲೋ ಅಥವಾ ಕ್ಲಬ್‌ನಲ್ಲಂತೂ ಹೋಗುವುದಿಲ್ಲವಲ್ಲ. ಇದೇ ಸಾಗರದ ತೀರವೂ ಆಗಿದೆ. ಹೂದೋಟವೂ ಆಗಿದೆ ಮತ್ತು ಕ್ಲಬ್ ಸಹ ಆಗಿದೆ. ಇದು ಬ್ರಾಹ್ಮಣ

ಕ್ಲಬ್ ಚೆನ್ನಾಗಿದೆಯಲ್ಲವೇ? ಬ್ರಾಹ್ಮಣ ಜೀವನದ ಶ್ವಾಸ ಉತ್ಸಾಹ-ಉಲ್ಲಾಸ. ಶ್ವಾಸದ ಗತಿ ಸರಿಯಾಗಿದೆಯಲ್ಲವೇ. ಅಥವಾ ಕೆಲವೊಮ್ಮೆ ಮೇಲೆ-ಕೆಳಗೆ ಆಗಿ ಬಿಡುತ್ತದೆಯೇ? ಬಾಪ್ ದಾದಾರವರು ಪ್ರತಿಯೊಂದು ಮಗುವನ್ನು ಚೆಕ್ ಮಾಡುತ್ತಿರುತ್ತಾರೆ. ಟೀವಿಯಲ್ಲಿ ಹಾಕಿಕೊಂಡು ಚೆಕ್ ಮಾಡುವ ಅವಶ್ಯಕತೆ ಬರುವುದಿಲ್ಲ. ಇತ್ತೀಚೆಗೆ ವಿಜ್ಞಾನದವರೂ ಸಹ ಎಲ್ಲವನ್ನು ಆಟೋಮೆಟಿಕ್ ತಯಾರಿಸಿದ್ದಾರೆ. ಎಂದ ಮೇಲೆ ಶಿವ ಜಯಂತಿ ಅಥವಾ ಶಿವರಾತ್ರಿ ಎರಡರ ರಹಸ್ಯ ಚೆನ್ನಾಗಿ ತಿಳಿದುಕೊಂಡಿದ್ದೀರಲ್ಲವೇ ಎರಡರ ರಹಸ್ಯವನ್ನು ತಿಳಿದುಕೊಂಡು ಅನ್ಯರಿಗೂ ಸಹ ಸ್ಪಷ್ಟವಾಗಿ ತಿಳಿಸಬಹುದು, ಏಕೆಂದರೆ ತಂದೆಯ ಜಯಂತಿಯ ಜೊತೆ ತಮ್ಮದೂ ಸಹ ಆಗಿದೆ. ತಮ್ಮ ಜನ್ಮದಿನದ ರಹಸ್ಯವನ್ನು ತಿಳಿಸಬಹುದು ತಾನೇ? ನೆನಪಾರ್ಥ ಭಕ್ತರು ದೊಡ್ಡ ಭಾವನೆಯಿಂದ ಆಚರಿಸುತ್ತಾರೆ ಆದರೆ ಅಂತರ ಇದಾಗಿದೆ ಶಿವರಾತ್ರಿಯಲ್ಲಿ ಪ್ರತೀ ವರ್ಷ ವ್ರತವನ್ನಿಡುತ್ತಾರೆ ಮತ್ತು ತಾವು ಪಿಕ್‌ನಿಕ್ ಮಾಡುತ್ತೀರಿ ಏಕೆಂದರೆ ತಾವೆಲ್ಲರೂ ಹುಟ್ಟಿನಿಂದಲೇ ಸದಾ ಕಾಲಕ್ಕೋಸ್ಕರ ಅರ್ಥಾತ್ ಸಂಪೂರ್ಣ ಬ್ರಾಹ್ಮಣ ಜೀವನಕ್ಕಾಗಿ ಒಂದು ಬಾರಿ ವ್ರತವನ್ನು ಧಾರಣೆ ಮಾಡಿದ್ದೀರಿ. ಅದಕ್ಕೋಸ್ಕರ ಮತ್ತೆ ಮತ್ತೆ ಮಾಡುವಂತಹ ಅವಶ್ಯಕತೆ ಇಲ್ಲ. ಅವರಾದರೆ ಪ್ರತಿ ವರ್ಷ ವ್ರತವನ್ನಿಡಬೇಕಾಗುತ್ತದೆ. ತಾವೆಲ್ಲ ಬ್ರಾಹ್ಮಣ ಆತ್ಮರು ಜನ್ಮದಿಂದಲೇ ಈ ವ್ರತವನ್ನು ತೆಗೆದುಕೊಂಡಿದ್ದೀರಿ. ನಾವು ಸದಾ ತಂದೆಯ ಸಮಾನ ಸಂಪನ್ನ ಮತ್ತು ಸಂಪೂರ್ಣರಾಗಿರುತ್ತೇವೆ. ಇದು ಪಕ್ಕಾ ವ್ರತ ತೆಗೆದುಕೊಂಡಿದ್ದೀರಾ ಅಥವಾ ಸ್ವಲ್ಪ ಕಚ್ಚಾ ಇದೆಯೇ..? ಆತ್ಮ ಮತ್ತು ಪರಮಾತ್ಮನ ಸಂಬಂಧ ಅವಿನಾಶಿಯಾಗಿದ್ದಾಗ ವ್ರತ ಅವಿನಾಶಿಯಾಗಿದೆಯಲ್ಲವೇ. ಪ್ರಪಂಚದವರು ಕೇವಲ ಆಹಾರ-ಪದಾರ್ಥಗಳ ವ್ರತವನ್ನಿಡುತ್ತಾರೆ. ಇದರಿಂದ ಏನು ಸಿದ್ಧವಾಗುತ್ತದೆ? ತಮ್ಮ ಬ್ರಾಹ್ಮಣ ಜೀವನದಲ್ಲಿ ಸದಾ ಕಾಲಕ್ಕೆ ಆಹಾರ ಪದಾರ್ಥಗಳ ವ್ರತವನ್ನಿಟ್ಟಿದ್ದೀರಿ ಅಲ್ಲವೇ. ಇದಂತೂ ಫ್ರೀ ಆಗಿದೆ ತಿನ್ನುವುದು, ಕುಡಿಯುವುದು ಯಾವುದೆಲ್ಲಾ ಇದೆ ಬೇಕಾದರೆ ತಿಂದು ಬಿಡಿ ಪಕ್ಕಾ ವ್ರತವಾಗಿದೆಯಾ ಅಥವಾ ಕೆಲವೊಮ್ಮೆ ಸುಸ್ತಾಗಿ ವ್ರತವನ್ನು ಮುರಿದು ಬಿಡುತ್ತೀರಾ? ಕೆಲವೊಮ್ಮೆ ಸಮಯ ಸಿಗುವುದಿಲ್ಲ. ಏನನ್ನು ಮಾಡಲಿ. ಏನಾದರೂ ತರಿಸಿಕೊಂಡು ತಿಂದು ಬಿಡುತ್ತೀರಾ? ಸ್ವಲ್ಪ ಸ್ವಲ್ಪ ಡೀಲವಾಗಿ ಮಾಡಿ ಬಿಡುತ್ತೀರಾ ನೋಡಿ. ತಮ್ಮ ಭಕ್ತರು ವ್ರತವನ್ನಿಡುತ್ತಿದ್ದಾರೆ. ಬೇಕಾದರೆ ವರ್ಷದಲ್ಲಿ ಒಮ್ಮೆ ಇಡಬಹುದು ಆದರೆ ಮರ್ಯಾದೆಯ ಪಾಲನೆಯನ್ನಂತೂ ಮಾಡುತ್ತಿದ್ದಾರಲ್ಲವೇ. ಯಾವಾಗ ತಮ್ಮ ಭಕ್ತರು ವ್ರತದಲ್ಲಿ ಪಕ್ಕಾ ಇದ್ದಾರೆ. ಅಂದಾಗ ತಾವು ಎಷ್ಟು ಪಕ್ಕಾ ಆಗಿದ್ದೀರಿ? ಪಕ್ಕಾ ಆಗಿದ್ದೀರಾ? ಕೆಲವೊಮ್ಮೆ ಸ್ವಲ್ಪ ಡೀಲಾ ಆಗಿ ಬಿಡುತ್ತೀರಾ ನಡೆಯಿರಿ ನಾಳೆ ಭೋಗವನ್ನು ಇಟ್ಟು ಬಿಡುತ್ತೇವೆ. ಇವತ್ತು ಇಡುವುದಿಲ್ಲ. ಇದೂ ಸಹ ತಾವು ಬ್ರಾಹ್ಮಣ ಆತ್ಮರ ಜೀವನದ ಬೇಹದ್ದಿನ ವ್ರತವು ನೆನಪಾರ್ಥವಾಗಿ ಮಾಡಲ್ಪಟ್ಟಿದೆ.

ವಿಶೇಷ ಈ ದಿನ ಪವಿತ್ರತೆಯ ಪ್ರತವನ್ನಿಡುತ್ತಾರೆ - 1. ಪವಿತ್ರತೆಯ ವ್ರತವನ್ನಿಡುತ್ತಾರೆ. 2. ಆಹಾರ ಪದಾರ್ಥಗಳ ವ್ರತವನ್ನಿಡುತ್ತಾರೆ. 3. ಇಡೀ ದಿನ ಯಾರಿಗೂ ಸಹ ಯಾವುದೇ ಪ್ರಕಾರದ ದುಃಖ ಅಥವಾ ಮೋಸ ಮಾಡುವುದಿಲ್ಲ. ಈ ವ್ರತವನ್ನಿಡುತ್ತಾರೆ. ಆದರೆ ತಮ್ಮ ಈ ಬ್ರಾಹ್ಮಣ ಜೀವನದ ವ್ರತ ಬೇಹದ್ದಿನದಾಗಿದೆ. ಅವರದು ಒಂದು ಹದ್ದಿನದ್ದಾಗಿದೆ. ಪವಿತ್ರತೆಯ ವ್ರತವು ಬ್ರಾಹ್ಮಣ ಜೀವದಿಂದಲೇ ಧಾರಣೆ ಮಾಡಿದ್ದೀರಲ್ಲವೇ. ಕೇವಲ ಬ್ರಹ್ಮಚರ್ಯವಲ್ಲ ಆದರೆ ವಿಕಾರಗಳ ಮೇಲೆ ವಿಜಯಿಗಳಾಗಿದ್ದೀರಿ - ಇದಕ್ಕೆ ಪವಿತ್ರತೆಯ ವ್ರತ ಎಂದು ಹೇಳಲಾಗುತ್ತದೆ. ಅಂದ ಮೇಲೆ ಯೋಚನೆ ಮಾಡಿ

ಪವಿತ್ರತೆಯ ವ್ರತವು ಎಲ್ಲಿಯವರೆಗೆ ಸಫಲವಾಗಿದೆ? ಹೇಗೆ ಬ್ರಹ್ಮಚರ್ಯ ಅರ್ಥಾತ್ ಕಾಮ ಮಹಾಶತ್ರುವಿನ ಮೇಲೆ ವಿಜಯವನ್ನು ಪಡೆಯುವುದರ ವಿಶೇಷ ಗಮನವನ್ನಿಡುತ್ತೀರೋ ಇದೇ ರೀತಿ ಅನ್ಯ 4 ಜೊತೆಗಾರರು ಕಾಮ ಮಹಾಶತ್ರುವಿನವರಾಗಿದ್ದಾರೆ. ಅವರ ಮೇಲೂ ಸಹ ಗಮನವಿರುತ್ತದೆಯೇ? ಅದಕ್ಕೋಸ್ಕರ ರಜೆಯಿದೆಯೇ - ಸ್ವಲ್ಪ ಸ್ವಲ್ಪ ಕೋಪವನ್ನು ಮಾಡಿ ಎಂದು? ರಜೆಯಂತೂ ಇಲ್ಲ ಆದರೆ, ತಮಗೆ ತಾವು ರಜೆಯನ್ನು ಕೊಟ್ಟು ಬಿಡುತ್ತೀರಾ? ನೋಡಲಾಗುತ್ತದೆ ಕ್ರೋಧದ ಮರಿಮಕ್ಕಳು ಯಾರೆಲ್ಲಾ ಇದ್ದಾರೆಯೋ ಅವರಿಗೇ ತಾವೇ ರಜೆಯನ್ನು ಕೊಟ್ಟುಬಿಟ್ಟಿದ್ದೀರಾ. ಕ್ರೋಧ ಮಹಾಭೂತವನ್ನು ಓಡಿಸಿದ್ದೀರಾ ಆದರೆ ಅವರ ಮರಿಮಕ್ಕಳ ಜೊತೆಯಲ್ಲಿ ಸ್ವಲ್ಪ ಪ್ರೀತಿಯನ್ನು ಈಗಲೂ ಇಟ್ಟಿದ್ದೀರಾ. ಹೇಗೆ ಚಿಕ್ಕ ಮಕ್ಕಳು ಇಷ್ಟವಾಗುತ್ತಾರಲ್ಲವೇ. ಎಂದ ಮೇಲೆ ಕ್ರೋಧದ ಚಿಕ್ಕ ಮಕ್ಕಳು ಕೆಲವೊಮ್ಮೆ ಪ್ರಿಯರೆನಿಸುತ್ತಾರೆಯೇ! ವ್ರತ ಅರ್ಥಾತ್ ಸಂಪೂರ್ಣ ಪವಿತ್ರತೆಯ ವ್ರತ ಕೆಲವು ಮಕ್ಕಳು ಬಹಳ ಒಕ್ಕೊಳ್ಳೆಯ ಮಾತುಗಳನ್ನು ತಿಳಿಸುತ್ತಾರೆ. ಹೇಳುತ್ತಾರೆ - 'ಕ್ರೋಧ ಬರಲಿಲ್ಲ. ಆದರೆ ಕ್ರೋಧವನ್ನು ತರಿಸಲಾಯಿತು, ಅದಕ್ಕೆ ಏನು ಮಾಡಲಿ? ನನಗಂತೂ ಬರಲಿಲ್ಲ ಆದರೆ ಅನ್ಯರು ತರಿಸಿ ಬಿಡುತ್ತಾರೆ!' ಬಹಳ ಮಜಾದ ಮಾತುಗಳನ್ನು ಆಡುತ್ತಾರೆ. ಹೇಳುತ್ತಾರೆ ತಾವೂ ಸಹ ಆ ಸಮಯದಲ್ಲಿ ಇದ್ದಿದ್ದರೆ ತಮಗೂ ಸಹ ಕ್ರೋಧವು ಬಂದು ಬಿಡುತ್ತಿತ್ತು. ಹಾಗಾದರೆ ಬಾಪ್‌ದಾದಾರವರು ಏನು ಹೇಳುತ್ತಾರೆ. ಬಾಪ್‌ದಾದಾ ಹೇಳುತ್ತಾರೆ - ಒಳ್ಳೆಯದು. ನಿಮ್ಮನ್ನು ಕ್ಷಮಿಸಿ ಬಿಟ್ಟೆನು ಆದರೆ ಮುಂದೆ ಪುನಃ ಮಾಡಬಾರದು.

ಶಿವರಾತ್ರಿ ಎಂದರೆ ಅಂಧಕಾರವನ್ನು ಸಮಾಪ್ತಿ ಮಾಡಿ ಜ್ಞಾನದ ಪ್ರಕಾಶವನ್ನು ತರುವುದು ಎಂದರ್ಥ. ಮಾಸ್ಟರ್ ಜ್ಞಾನ ಸೂರ್ಯರು ಪ್ರಕಟವಾಗುವುದೇ ಶಿವರಾತ್ರಿಯಾಗಿದೆ. ತಾವು ಮಾಸ್ಟರ್ ಜ್ಞಾನ ಸೂರ್ಯರಾಗಿ ವಿಶ್ವದ ಅಂಧಕಾರವನ್ನು ಸಮಾಪ್ತಿ ಮಾಡಿ ಬೆಳಕನ್ನು ಕೊಡುವಂತಹವರು. ಯಾರು ವಿಶ್ವಕ್ಕೆ ಬೆಳಕನ್ನು ಕೊಡುವಂತಹವರಾಗಿದ್ದಾರೆಯೋ ಅವರು ಸ್ವಯಂ ಯಾರಾಗಿರುತ್ತಾರೆ? ಸ್ವಯಂ ಅಂತೂ ಅಂಧಕಾರದಲ್ಲಿ ಇರುವುದಿಲ್ಲ. ದೀಪದ ತರಹ ಅಂತೂ ಇಲ್ಲ ತಾನೇ? ದೀಪದ ಕೆಳಗಡೆ ಅಂಧಕಾರವಿರುತ್ತದೆ, ಮೇಲ್ಗಡೆ ಬೆಳಕಿರುತ್ತದೆ. ತಾವು ಮಾಸ್ಟರ್ ಜ್ಞಾನಸೂರ್ಯರಾಗಿದ್ದೀರಾ. ಹಾಗಾದರೆ ಮಾಸ್ಟರ್ ಜ್ಞಾನ ಸೂರ್ಯರು ಸ್ವಯಂ ಪ್ರಕಾಶ ರೂಪರಾಗಿದ್ದೀರಿ, ಲೈಟ್ ಮೈಟ್ ರೂಪದವರಾಗಿದ್ದೀರಿ ಮತ್ತು ಅನ್ಯರಿಗೂ ಸಹ ಲೈಟ್ ಮೈಟ್ ಕೊಡುವಂತಹವರಾಗಿದ್ದೀರಿ. ಎಲ್ಲಿ ಸದಾ ಬೆಳಕಿರುತ್ತದೆಯೋ ಅಲ್ಲಿ ಅಂಧಕಾರದ ಪ್ರಶ್ನೆಯೇ ಬರುವುದಿಲ್ಲ. ಅಂಧಕಾರ ಇರುವುದಕ್ಕೆ ಸಾಧ್ಯವಿಲ್ಲ. ಸಂಪೂರ್ಣ ಪವಿತ್ರತೆ ಅರ್ತಾತ್ ಪ್ರಕಾಶತೆಯಾಗಿದೆ. ಅಂಧಕಾರವನ್ನು ಸಮಾಪ್ತಿ ಮಾಡುವಂತಹ ಅತ್ಮರ ಸಮೀಪ ಅಂಧಕಾರವಿರುವುದಕ್ಕೆ ಸಾಧ್ಯವಿಲ್ಲ. ಇರುವುದಕ್ಕೆ ಸಾಧ್ಯವೇ? ಬರುವುದಕ್ಕೆ ಸಾಧ್ಯವೇ? ಅಥವಾ ಆಗಾಗ ಬಂದು ಹೋಗುತ್ತಿದೆಯೇ? ಇದೂ ಆಗುವುದಕ್ಕೆ ಸಾಧ್ಯವೇ? ಹಾಗಾದರೆ ಯಾವುದೇ ವಿಕಾರದ ಅಂಶವಿದ್ದರೆ ಅದನ್ನು ಪ್ರಕಾಶತೆ ಎಂದು ಹೇಳಲಾಗುತ್ತದೆಯೇ? ಅಥವಾ ಅಂಧಕಾರವೆಂದು ಹೇಳಲಾಗುತ್ತದೆಯೇ? ಅಂಧಕಾರ ಸಮಾಪ್ತಿಯಾಯಿತಲ್ಲವೇ. ಶಿವರಾತ್ರಿಯ ಚಿತ್ರವಂತೂ ತೋರಿಸುತ್ತೀರಲ್ಲವೇ. ಅದರಲ್ಲಿ ಏನನ್ನು ತೋರಿಸುತ್ತೀರಿ? ಅಂಧಕಾರವನ್ನು ಓಡಿಸುತ್ತಿದ್ದೀರಿ ಎಂದು. ಅಥವಾ ಸ್ವಲ್ಪ ಸ್ವಲ್ಪ ಉಳಿದು ಕೊಂಡಿದೆಯೇ? ಈ ಶಿವರಾತ್ರಿಯಲ್ಲಿ ವಿಶೇಷವಾಗಿ ಏನು ಮಾಡುತ್ತೀರಿ. ಸ್ವಲ್ಪ ಮಾಡುತ್ತೀರಾ ಅಥವಾ

ಬಾವುಟವನ್ನು ಮಾತ್ರ ಹಾರಿಸುತ್ತೀರಾ? ಹೀಗೆ ಮಾಡುವುದಿಲ್ಲ ಹಾಗೆ ಮಾಡುವುದಿಲ್ಲ ಎಂದು ಸದಾ ಪ್ರತಿಜ್ಞೆ ಮಾಡುತ್ತೀರಿ ಮತ್ತು ಪುನಃ ಮಾಡುತ್ತಿಲ್ಲ ತಾನೆ? ಮೊದಲೂ ಸಹ ತಿಳಿಸಿದ್ದೇನೆ. ಪ್ರತಿಜ್ಞೆಯ ಅರ್ಥವಾಗಿದೆ ಪ್ರಾಣ ಹೋಗಲಿ ಆದರೆ ಪ್ರತಿಜ್ಞೆಯು ಮುರಿದು ಹೋಗಬಾರದು. ಸಮಸ್ಯೆ ಇಲ್ಲದಿದ್ದಾಗ ಪ್ರತಿಜ್ಞೆಯು ಸರಿಯಾಗಿದ್ದು ಸಮಸ್ಯೆ ಇದ್ದಾಗ ಅಥವಾ ಸಮಸ್ಯೆ ಶಕ್ತಿಶಾಲಿ ಆದರೆ ಪ್ರತಿಜ್ಞೆಯು ಅದರ ಮುಂದೆ ನಿರ್ಬಲವಾದರೆ ಅದನ್ನು ಪ್ರತಿಜ್ಞೆ ಎಂದು ಹೇಳಲಾಗುವುದಿಲ್ಲ. ವಚನ ಅರ್ಥಾತ್ ವಚನ ಇಂತಹ ಪ್ರತಿಜ್ಞೆಯನ್ನು ಮನಸ್ಸಿನಿಂದ ಮಾಡಿ ಹೇಳುವುದರಿಂದಲ್ಲ. ಹೇಳುವುದಕ್ಕಿಂತ ಮಾಡುವಂತಹವರು ಆ ಸಮಯದಲ್ಲಿ ಶಕ್ತಿಶಾಲಿ ಸಂಕಲ್ಪವನ್ನು ಮಾಡುತ್ತಾರೆ. ಯಾವಾಗ ಮನಸ್ಸಿನಿಂದ ಪ್ರತಿಜ್ಞೆ ಮಾಡುತ್ತೇವೆ ಹಾಗೂ ಯಾರ ಜೊತೆಯಲ್ಲಿ ಪ್ರತಿಜ್ಞೆ ಮಾಡುತ್ತೀರಿ. ಎಂದ ಮೇಲೆ ತಂದೆಯೊಂದಿಗೆ ಮನಸ್ಸಿನಿಂದ ಪ್ರತಿಜ್ಞೆ ಮಾಡುವುದು ಅರ್ಥಾತ್ ಮನಸ್ಸಿನಿಂದ 'ಮನ್ಮನಾಭವ' ಆಗುವುದು ಮತ್ತು ಮನ್ಮನಾಭವದ ಮಂತ್ರವೂ ಸಹ ಯಾವುದೇ ಪರಿಸ್ಥಿತಿಗಳಲ್ಲಿ ಯಂತ್ರವಾಗಿ ಬಿಡುತ್ತದೆ. ಆದರೆ ಮನಸ್ಸಿನಿಂದ ಮಾಡುವುದರಿಂದ ಇದಾಗುತ್ತದೆ. ಮನಸ್ಸಿನಲ್ಲಿ ಬಂತು ಇದನ್ನು ನಾನು ಮಾಡಬಾರದೆಂದು, ಹಾಗಾದರೆ ಮನಸ್ಸಿನಲ್ಲಿ ಈ ಸಂಕಲ್ಪ ಬಂತೆಂದರೆ ಪ್ರಯತ್ನ ಮಾಡುತ್ತೇವೆ. ಮಾಡಲೇ ಬೇಕಾಗುತ್ತದೆ ತಯಾರಾಗಲೇ ಬೇಕಾಗುತ್ತದೆ. ಈ ರೀತಿ ಮಾಡದಿದ್ದರೆ ಏನಾಗುತ್ತದೆ! ಏನು ಮಾಡುತ್ತೀರಿ? ಆದ್ದರಿಂದ ಮಾಡಿ ಬಿಡಿ...ಇದಕ್ಕೆ ಹೇಳಲಾಗುತ್ತದೆ ಸ್ವಲ್ಪ ಸ್ವಲ್ಪ ನಿರ್ಬಲತೆ, ಯಾರು ಮನಸ್ಸಿನಿಂದ ಮಾಡುವಂತಹವರು ಆಗಿದ್ದಾರೆಯೋ ಅವರು ಇದನ್ನು ಮಾಡಲೇಬೇಕಾಗುವುದೆಂದು ಯೋಚನೆ ಮಾಡುವುದಿಲ್ಲ.ಅವರು ಯೋಚನೆ ಮಾಡುತ್ತಾರೆ ತಂದೆ ಹೇಳಿದರೆಂದರೆ ಅದು ಮಾಡಲ್ಪಟ್ಟಿದೆ. ನಿಶ್ಚಯ ಮತ್ತು ಸಫಲತೆಯಲ್ಲಿ ನಿಶ್ಚಿಂತರಾಗಿರುತ್ತಾರೆ. ಇದಾಗಿದೆ ಫರ್ಸ್ಟ್ ನಂಬರಿನ ಪ್ರತಿಜ್ಞೆ, ಸೆಕೆಂಡ್ ನಂಬರಿನ ಪ್ರತಿಜ್ಞೆಯಾಗಿದೆ ಆಗಲೇಬೇಕು. ಮಾಡಲೇಬೇಕು. ಆದರೆ ಯಾವಾಗ ಆಗುತ್ತದೆ ತಿಳಿದಿಲ್ಲ. ಇಲ್ಲ 'ಇದನ್ನು ಮಾಡುತ್ತೇನೆ, ನೋಡುತ್ತೇನೆ ಅರ್ಥಾತ್ ಗಿಳಿಗಳಾಗುವುದಾಗಿದೆ. ಬಾಪ್-ದಾದಾರವರ ಹತ್ತಿರ ಪ್ರತಿಯೊಬ್ಬರು ಅನೇಕ ಬಾರಿ ಪ್ರತಿಜ್ಞೆಯನ್ನು ಮಾಡಿದ್ದಾರೆ. ಅದೆಲ್ಲಾ ಫೈಲ್ ತಂದೆಯ ಬಳಿಯಿದೆ. ಫೈಲ್ ಅಂತೂ ಬಹಳ ದೊಡ್ಡದಾಗಿ ಹೋಗಿದೆ. ಈಗ ಫೈಲ್ ಅನ್ನು ತುಂಬಿಸಬಾರದು. ಫೈನಲ್ ಮಾಡಬೇಕಾಗಿದೆ. ಯಾರಾದರೂ ಬಾಪ್-ದಾದಾರವರಿಗೆ ಹೇಳುತ್ತಾರೆ ಪ್ರತಿಜ್ಞೆಯ ಪತ್ರವನ್ನು ಬರೆದಿದ್ದೇವೆ. ಬಾಪ್‌ದಾದಾರವರ ಎದುರಿಗೆ ಎಲ್ಲಾ ಫೈಲ್‌ಗಳು ಬಂದು ಬಿಡುತ್ತವೆ. ಈಗಲೂ ಸಹ ಈ ರೀತಿ ಮಾಡುತ್ತೀರಾ? ಫೈಲ್ ನಲ್ಲಿ ಪತ್ರಗಳನ್ನು ಒಂದಕ್ಕೆ ಒಂದು ಕೂಡಿಸುತ್ತೀರಾ ಅಥವಾ ಪ್ರತಿಜ್ಞೆಯನ್ನು ಮಾಡುತ್ತೀರಾ? ಪ್ರತಿಜ್ಞೆ ಬಲಹೀನವಾಗುವುದಕ್ಕೆ ಒಂದು ಕಾರಣವನ್ನು ಬಾಪ್-ದಾದಾರವರು ನೋಡಿದ್ದಾರೆ. ಆ ಒಂದು ಶಬ್ದ ಭಿನ್ನ ಭಿನ್ನ ರಾಯಲ್ ರೂಪದಲ್ಲಿ ಬರುತ್ತದೆ ಮತ್ತು ಬಲಹೀನರನ್ನಾಗಿ ಮಾಡುತ್ತದೆ. ಆ ಒಂದು ಶಬ್ದವಾಗಿದೆ ದೇಹಾಭಿಮಾನದ 'ನಾನು', ಈ ನಾನು ಎನ್ನುವ ಶಬ್ದ ಮೋಸ ಮಾಡುತ್ತದೆ. 'ನಾನು' ಈ ರೀತಿ ತಿಳಿದುಕೊಳ್ಳುತ್ತೇನೆ. 'ನಾನು' ಇದನ್ನು ಮಾಡಬಲ್ಲೆನು. 'ನಾನು' ಹೇಳುವುದೇ ಸರಿಯಾಗಿದೆ. 'ನಾನು' ಯೋಚನೆ ಮಾಡುತ್ತೇನೆ ಅದು ಸರಿಯಾಗಿದೆ - ಹಾಗಾದರೆ ಭಿನ್ನ-ಭಿನ್ನ ರಾಯಲ್ ರೂಪದಲ್ಲಿ ನನ್ನತನವು ಪ್ರತಿಜ್ಞೆಯನ್ನು ನಿರ್ಬಲ ಮಾಡಿ ಬಿಡುತ್ತದೆ. ಕೊನೆಗೂ ನಿರ್ಬಲರಾಗಿ ಬಲಹೀನವಾಗಿ ನಾನು ಇಷ್ಟೊಂದು ಸಹನೆ ಮಾಡುವುದಕ್ಕೆ ಆಗುವುದಿಲ್ಲ! ತನ್ನನ್ನು ತಾನು ಒಂದೇ ಬಾರಿಗೆ ನಿರ್ಮಾಣವನ್ನಾಗಿ ಮಾಡಿ ಬಿಡಲಿ. ಇಷ್ಟೊಂದು ಮಾಡುವುದಕ್ಕೆ ಆಗುವುದಿಲ್ಲ ಪರಿಶ್ರಮವಿದೆ. ಎಂದು ಯೋಚಿಸುತ್ತಾರೆ. ಈ ನನ್ನತನವು ಬಲಹೀನರನ್ನಾಗಿ ಮಾಡಿ ಬಿಡುತ್ತದೆ. ಬಹಳ ಒಳ್ಳೆಯ ರಾಯಲ್ ರೂಪವಾಗಿದೆ. ತಮ್ಮ ಜೀವನದಲ್ಲಿ ನೋಡಿ

ನನ್ನತನ ಸಂಸ್ಕಾರದ ರೂಪದಲ್ಲಿ, ಸ್ವಭಾವದ ರೂಪದಲ್ಲಿ, ಭಾವದ ರೂಪದಲ್ಲಿ, ಭಾವನೆಯ ರೂಪದಲ್ಲಿ, ಮಾತಿನ ರೂಪದಲ್ಲಿ, ಸಂಬಂಧ-ಸಂಪರ್ಕದ ರೂಪದಲ್ಲಿ ಹಾಗೂ ಬಹಳ ಮಧುರ ರೂಪದಲ್ಲಿ ಬರುತ್ತದೆಯೇ? ಶಿವರಾತ್ರಿಯಲ್ಲಿ 'ನಾನು' - 'ನಾನು' ಎಂಬ ಭಾವನೆಯ ಬಲಿಯನ್ನು ಕೊಡುತ್ತೀರಾ. ಭಕ್ತರು ಪಾಪ ತಿಳುವಳಿಕೆ ಇಲ್ಲದೆ 'ನಾನು' - 'ನಾನು' ಎನ್ನುವ ಮೇಕೆಯನ್ನು(ಮೇಕೆಯ ಮೇ-ಮೇ ಎಂಬುದು ಹಿಂದಿಯಲ್ಲಿ ನಾನು ಎಂಬ ಅರ್ಥವನ್ನು ಕೊಡುತ್ತದೆ) ಬಲಿ ಕೊಡುತ್ತಾರೆ. ಆದರೆ ಇಲ್ಲ 'ನಾನು' - 'ನಾನು' ಇದರ ಬಲಿಯನ್ನು ಕೊಡಿ. ತಮ್ಮೆಲ್ಲರ ಸ್ಮೃತಿ ಚಿಹ್ನೆಯನ್ನು ಅವರು ಮತ್ತೊಂದು ರೂಪದಲ್ಲಿ ಆಚರಣೆ ಮಾಡುತ್ತಿದ್ದಾರೆ. ಬಲಿಯನ್ನು ಕೊಟ್ಟು ಬಿಟ್ಟಿದ್ದೀರಾ ಅಥವಾ ಈಗ ಸ್ವಲ್ಪ ನನ್ನತನದ ಬಲಿ ಉಳಿದಿದೆಯೇ ಏನು ಫಲಿತಾಂಶವಿದೆ? ಪ್ರತಿಜ್ಞೆ ಮಾಡುತ್ತಿದ್ದೀರೆಂದರೆ ಸಂಪೂರ್ಣ ಪ್ರತಿಜ್ಞೆಯನ್ನು ಮಾಡಿ. ತಂದೆಯ ಜೊತೆಯಲ್ಲಿ ಪ್ರೀತಿಯಿದೆ. ಪ್ರೀತಿಯಲ್ಲಿ ಎಲ್ಲವೂ ಪಾಸ್ ಆಗುತ್ತದೆ. ಕೆಲವರು ಹೇಳುತ್ತಾರೆ ತಂದೆಯೊಂದಿಗೆ 75% ಪ್ರೀತಿಯಿದೆ, 50% ಪ್ರೀತಿಯಿದೆ ಎಂದು? ಪ್ರೀತಿಗಾಗಿ ಎಲ್ಲರೂ ಹೇಳುತ್ತಾರೆ 100% ಗಿಂತಲೂ ಜಾಸ್ತಿಯಿದೆ ಎಂದು! ತಂದೆಯೂ ಸಹ ಹೇಳುತ್ತಾರೆ ಎಲ್ಲರೂ ಪ್ರೀತಿ ಮಾಡುವವರಾಗಿದ್ದೀರಿ. ಇದರಲ್ಲಂತೂ ಎಲ್ಲರೂ ಪಾಸ್. ಪ್ರೀತಿಯಲ್ಲಿ ತ್ಯಾಗದ ವಸ್ತುವೇನಿದೆ! ಹಾಗಾದರೆ ಪ್ರತಿಜ್ಞೆಯನ್ನು ಮನಸ್ಸಿನಿಂದ ಮಾಡಿ ಮತ್ತು ದೃಢ ಮಾಡಿಕೊಳ್ಳಿ. ಮತ್ತೆ-ಮತ್ತೆ ತಮ್ಮನ್ನು ತಾವು ಚೆಕ್ ಮಾಡಿಕೊಳ್ಳಿ ಪ್ರತಿಜ್ಞೆಯ ಪವರ್ ಫುಲ್ ಇದೆಯೇ ಅಥವಾ ಪರೀಕ್ಷೆಯ ಪವರ್ ಫುಲ್ ಇದೆಯೇ ಎಂದು? ಯಾವುದಾದರೊಂದು ಪರೀಕ್ಷೆ ಪ್ರತಿಜ್ಞೆಯನ್ನು ಬಲಹೀನವನ್ನಾಗಿ ಮಾಡಿಬಿಡುತ್ತದೆ.

ಡಬಲ್ ವಿದೇಶಿಗಳು ಪ್ರತಿಜ್ಞೆ ಮಾಡುವುದರಲ್ಲಿ ಬುದ್ಧಿವಂತರಾಗಿದ್ದೀರಿ. ಮುರಿಯುವುದರಲ್ಲಿ ಅಲ್ಲ. ಜೋಡಣೆ ಮಾಡುವುದರಲ್ಲಿ ಬುದ್ಧಿವಂತರಾಗಿದ್ದೀರಿ. ಬಾಪ್‌ದಾದಾರವರು ಡಬಲ್ ವಿದೇಶಿ ಮಕ್ಕಳನ್ನು ನೋಡಿ ಹರ್ಷಿತರಾಗಿದ್ದಾರೆ. ತಂದೆಯನ್ನು ಗುರುತಿಸಿದಿರಲ್ಲವೆ! - ಇದು ಎಲ್ಲದಕ್ಕಿಂತ ದೊಡ್ಡದಕ್ಕಿಂತ ದೊಡ್ಡ ಅದ್ಭುತವಾಗಿದೆ ಎರಡನೆಯ ಅದ್ಭುತ - ವರೈಟಿ ವೃಕ್ಷದ ರೆಂಬೆಗಳಾಗಿದ್ದರೂ ಒಬ್ಬ ತಂದೆಯ ಚಂದನದ ವೃಕ್ಷದ ರೆಂಬೆಗಳಾಗಿ ಬಿಟ್ಟಿದ್ದೀರಿ. ಈಗ ಒಂದು ವೃಕ್ಷದ ರೆಂಬೆಗಳಾಗಿದ್ದೀರಿ. ಭಿನ್ನತೆಯಲ್ಲೂ ಏಕತೆಯನ್ನು ತಂದಿದ್ದೀರಿ. ದೇಶ ಭಿನ್ನವಾಗಿದೆ. ಭಾಷೆ ಭಿನ್ನವಾಗಿದೆ. ಸಂಸ್ಕೃತಿ ಭಿನ್ನ ಭಿನ್ನವಾಗಿದೆ ಆದರೆ ತಾವೆಲ್ಲರು ಭಿನ್ನತೆಯಲ್ಲೂ ಏಕತೆಯನ್ನು ತಂದಿದ್ದೀರಿ. ಈಗ ಎಲ್ಲರ ಸಂಸ್ಕೃತಿ ಯಾವುದಾಗಿದೆ? ಬ್ರಾಹ್ಮಣರ ಸಂಸ್ಕೃತಿಯಾಗಿದೆ. ನಮ್ಮ ವಿದೇಶದ ಸಂಸ್ಕೃತಿ ಈ ರೀತಿ ಹೇಳುತ್ತದೆ! ಅಥವಾ ಭಾರತವಾಸಿಗಳು ಹೇಳಲಿ ನಮ್ಮ ಭಾರತದ ಸಂಸ್ಕೃತಿ ಈ ರೀತಿ ಇದೆ ಎಂದು ಎಂದೂ ಹೇಳಬಾರದು. ಹಾಗೆಯೇ ಭಾರತವಾಸಿಯರು ಕೂಡ ನಮ್ಮ ಸಂಸ್ಕೃತಿ ಹೇಗಿರುತ್ತದೆ ಎಂದು ಹೇಳಬಾರದು. ಭಾರತೀಯರು ಅಥವಾ ವಿದೇಶೀಯರ ಸಂಸ್ಕೃತಿ ಎಂದಲ್ಲ, ಇದು ಬ್ರಾಹ್ಮಣರ ಸಂಸ್ಕೃತಿ. ಭಿನ್ನತೆಯಲ್ಲಿ ಏಕತೆ - ಇದು ಅದ್ಭುತವಾಗಿದೆ ಇನ್ನೂ ಯಾವ ಅದ್ಭುತವನ್ನು ಮಾಡಿದ್ದೀರಿ. ತಂದೆಯವರಾದಿರಿ ಎಲ್ಲಾ ಪ್ರಕಾರದ ಭಿನ್ನ ಭಿನ್ನ ರೀತಿ ಪದ್ಧತಿಗಳು ದಿನಚರಿ ಎಲ್ಲವನ್ನೂ ಸೇರಿಸಿ ಒಂದಾಗಿ ಮಾಡಿಬಿಟ್ಟಿದ್ದೀರಿ. ಅಮೇರಿಕಾದಲ್ಲಿರಲಿ, ಅಥವಾ ಲಂಡನ್‌ನಲ್ಲಿರಲಿ, ಎಲ್ಲೇ ಇರಬಹುದು ಆದರೆ ಬ್ರಾಹ್ಮಣರ ದಿನಚರಿ ಒಂದೇ ಆಗಿದೆಯೇ ಅಥವಾ ಬೇರೆಯಾಗಿದೆಯೇ? ವಿದೇಶದ ದಿನಚರಿ ಬೇರೆ, ಭಾರತದ ದಿನಚರಿ ಬೇರೆ - ಇಲ್ಲ. ಎಲ್ಲರದೂ ಒಂದೇ ಆಗಿದೆ. ಹಾಗಾದರೆ ಈ ಭಿನ್ನತೆಯ ತ್ಯಾಗ - ಇದು ಅದ್ಭುತವಾಗಿದೆ. ತಿಳಿಯಿತೇ, ಏನೇನು ಅದ್ಭುತವನ್ನು ಮಾಡಿದ್ದೀರಿ? ಹೇಗೆ ತಾವು

ತಂದೆಗೋಸ್ಕರ ಗಾಯನ ಮಾಡುತ್ತೀರಿ ತಂದೆ ಅದ್ಭುತವನ್ನು ಮಾಡಿದರು. ತಂದೆ ಪುನಃ ಹಾಡುತ್ತಾರೆ ಮಕ್ಕಳು ಅದ್ಭುತವನ್ನು ಮಾಡಿದರೆಂದು ಇದನ್ನು  ನೋಡಿ ಬಾಪ್‌ದಾದಾರವರು   ಹರ್ಷಿತರಾಗುತ್ತಾರೆ. ತಂದೆಯು ಹರ್ಷಿತರಾಗುತ್ತಾರೆ ಮತ್ತು ಮಕ್ಕಳು ಖುಷಿಯಲ್ಲಿ ನರ್ತಿಸುತ್ತಾರೆ.

ಸೇವೆಯ ಬಗ್ಗೆ ನಾಲ್ಕಾರು ಕಡೆ ವಿದೇಶದಲ್ಲಿ, ದೇಶದಲ್ಲಿ ಕೇಳುತ್ತಿರುತ್ತೇನೆ. ಎರಡರ ಸೇವೆಯಲ್ಲಿಯೂ ರೇಸ್ ಮಾಡುತ್ತಿದ್ದಾರೆ ಕಾರ್ಯಕ್ರಮಗಳು ಎಲ್ಲವೂ ಚೆನ್ನಾಗಿ ಆಗಿದೆ ಮತ್ತು ಮುಂದೆಯೂ ಸಹ ಆಗುತ್ತಾ ಇರುತ್ತದೆ. ಈ ದೃಢ ಸಂಕಲ್ಪವನ್ನು ಉಪಯೋಗಿ. ಅರ್ಥಾತ್ ಸಫಲ ಮಾಡಿದ್ದೀರಿ. ಎಷ್ಟು ದೃಢ ಸಂಕಲ್ಪವನ್ನು ಸಫಲ ಮಾಡುತ್ತಾ ಹೋಗುತ್ತೀರೋ ಅಷ್ಟು ಸಹಜ ಸಫಲತೆಯ ಅನುಭವವಾಗುತ್ತಾ ಹೋಗುತ್ತದೆ ಎಂದೂ ಸಹ ಈ ರೀತಿ ಯೋಚನೆ ಮಾಡಬಾರದು ಇದು ಹೇಗೆ ಆಗುತ್ತದೆ. 'ಹೇಗೆ' ಎನ್ನುವ ಬದಲಾಗಿ 'ಹೀಗೆ' ಆಗುವುದು. ಸಂಗಮದ ವಿಶೇಷ ವರದಾನವೇ ಆಗಿದೆ ಅಸಂಭವವನ್ನು ಸಂಭವ ಮಾಡಿ. ''ಹೇಗೆ" ಎನ್ನುವ ಶಬ್ಧ ಬರಲು ಸಾಧ್ಯವೇ ಇಲ್ಲ. ಈ ರೀತಿ ಆಗುವುದು ಕಷ್ಟವಾಗಿದೆ - ಇಲ್ಲ. ನಿಶ್ಚಯ ಇಡುತ್ತಾ ಹೋಗಿ - ಇದು ಆಗಿಯೇ ಬಿಟ್ಟಿದೆ. ಕೇವಲ ಪ್ರಾಕ್ಟಿಕಲ್ ನಲ್ಲಿ ತರಬೇಕಾಗಿದೆ. ಇದು ರಿಪೀಟ್ ಆಗಬೇಕು. ಆಗಿಯೇ ಬಿಟ್ಟಿದೆ. ಆಗಿರುವುದನ್ನು ಮತ್ತೆ ಮಾಡುವುದು ಅರ್ಥಾತ್ ರಿಪೀಟ್ ಮಾಡುವುದಾಗಿದೆ. ಸಹಜ ಸಫಲತೆಯ ಆಧಾರ ದೃಢ ಸಂಕಲ್ಪದ ಖಜಾನೆಯನ್ನು ಸಫಲ ಮಾಡಿ ತಿಳಿಯಿತೇ. ಏನಾಗುವುದು, ಹೇಗಾಗುವುದು - ಈ ರೀತಿ ಅಲ್ಲ. ಆಗುವುದು ಹಾಗೂ ಸಹಜವಾಗಿ ಆಗುವುದು! ಸಂಕಲ್ಪದ ಏರು- ಪೇರು ಇದ್ದರೆ ಆಗ ಸಫಲತೆಯನ್ನು ಅದು ಏರು ಪೇರಿನಲ್ಲಿ ತಂದು ಬಿಡುವುದು. ಒಳ್ಳೆಯದು!

**ನಾಲ್ಕಾರು ಕಡೆಯ ಸದಾ ಉತ್ಸವ ಆಚರಿಸುವಂತಹ, ಸದಾ ಉತ್ಸಾಹ ಉಲ್ಲಾಸದಲ್ಲಿ ಹಾರುವಂತಹ, ಸದಾ ಸಂಪೂರ್ಣ ಪ್ರತಿಜ್ಞೆಯ ಪಾತ್ರಕ್ಕೆ ಅಧಿಕಾರಿ ಆತ್ಮರಿಗೆ, ಸದಾ ಅಸಂಭವವನ್ನು ಸಹಜ ಸಂಭವ ಮಾಡುವ, ಸದಾ ಪ್ರತಿ ಪ್ರಕಾರದ ಪರೀಕ್ಷೆಗಳನ್ನು ಬಲಹೀನ ಮಾಡಿ ಪ್ರತಿಜ್ಞೆಯನ್ನು ಶಕ್ತಿಶಾಲಿಯನ್ನಾಗಿ ಮಾಡುವಂತಹ ಸದಾ ತಂದೆಯ ಪ್ರೀತಿಯ ರಿಟರ್ನ್ ನಲ್ಲಿ ಏನನ್ನು ಬೇಕಾದರೂ ತ್ಯಾಗ ಮಾಡುವಂತಹ ಸಾಹಸವಂತ, ಇಂತಹ ತ್ರಿಮೂರ್ತಿ ಶಿವಬಾಬಾರವರ ಜನ್ಮ-ಜೊತೆಗಾರ, ಬ್ರಾಹ್ಮಣ ಆತ್ಮರಿಗೆ ಅಲೌಕಿಕ ಜನ್ಮ ದಿನದ ನೆನಪು, ಪ್ರೀತಿ ಹಾಗೂ ಶುಭಾಷಯಗಳು! ಬಾಪ್ ದಾದಾರವರ ವಿಶೇಷ ಶ್ರೇಷ್ಠ ಆತ್ಮರಿಗೆ ನಮಸ್ತೆ.**

ರಿವೈಸ್ ಕೋರ್ಸ್18-02-1993

**ಬ್ರಾಹ್ಮಣ ಜೀವನದ ಶ್ವಾಸ ಉತ್ಸಾಹ ಉಲ್ಲಾಸ.**

ಬ್ರಾಹ್ಮಣ ಜೀವನದ ಅಲೌಕಿಕ ಡಿಕ್ಷನರಿಯಲ್ಲಿ ಆಚರಿಸುವುದು ಅರ್ಥಾತ್ ತಯಾರಾಗುವುದಾಗಿದೆ. ಕೇವಲ ಇಂದು ಉತ್ಸವವನ್ನು ಆಚರಿಸುತ್ತೀರಾ ಅಥವಾ ಸದಾ ಉತ್ಸಾಹ ತುಂಬಿದ ಜೀವನವನ್ನು ತಯಾರು ಮಾಡಿಕೊಳ್ಳುತ್ತೀರಾ? ಹೇಗಾದರೆ ಈ ಸ್ಥೂಲ ಶರೀರದಲ್ಲಿ ಶ್ವಾಸವಿದ್ದರೆ ಜೀವನವಿರುತ್ತದೆ ಶ್ವಾಸ ಸಮಾಪ್ತಿ ಆದರೆ ಜೀವನ

ಸಮಾಪ್ತಿಯಾಗುತ್ತದೆಯೋ ಹಾಗೆಯೇ ಬ್ರಾಹ್ಮಣ ಜೀವನದ ಶ್ವಾಸ ಸದಾ ಉತ್ಸಾಹ ಉಲ್ಲಾಸವಾಗಿದೆ. ಒಂದು ಕ್ಷಣವೂ ಉತ್ಸಾಹ ಉಲ್ಲಾಸವಿಲ್ಲದಿದ್ದರೆ ಅದು ಬ್ರಾಹ್ಮಣ ಜೀವನವಲ್ಲ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ಸರ್ವಪ್ರಾಪ್ತಿಗಳಿಗೆ ಮಾಲೀಕರಾಗಿ, ವಾರಸುದಾರನನ್ನಾಗಿ, ಈಶ್ವರೀಯ ವಿದ್ಯಾರ್ಥಿಯಾಗಿ, ಪ್ರತಿ ಹೆಜ್ಜೆಯಲ್ಲಿ ಫಾಲೋ ಮಾಡುವಂತಹ ಸದ್ಗುರುವಿಗೆ ಪ್ರಿಯರನ್ನಾಗಿ ತಂದೆ ನನ್ನನ್ನು ನೋಡುತ್ತಿದ್ದಾರೆ.

2. ನಾನು ಬ್ರಾಹ್ಮಣ ಜೀವನದ ಉತ್ಸಾಹವನ್ನು ಆಚರಿಸಿಕೊಳ್ಳುತ್ತಾ ಉತ್ಸಾಹ ಉಲ್ಲಾಸಗಳ ಜೀವನವನ್ನು ತಯಾರು ಮಾಡಿಕೊಳ್ಳುತ್ತಿದ್ದೇನೆ.

3. ನನ್ನ ಉತ್ಸಾಹ ಉಲ್ಲಾಸಗಳ ವೇಗ ಸದಿ ಏಕರಸವಾಗಿದೆ.

4. ನಾನು ಜನ್ಮ ಪಡೆಯುತ್ತಿದ್ದಂತೆಯೇ ತಂದೆಯ ಸಮಾನವಾಗಿ, ಸಂಪನ್ನವಾಗಿ, ಸಂಪೂರ್ಣವಾಗಿ, ಆಗಬೇಕೆಂಬ ವ್ರತವನ್ನು ಇಟ್ಟುಕೊಂಡಿದ್ದೇನೆ.

5. ನಾನು ವಿಕಾರಗಳಷ್ಟೇ ಅಲ್ಲದೆ ವಿಕಾರಗಳ ಸಂತಾನದ ಮೇಲು ವಿಜಯವನ್ನು ಪಡೆಯುವ ಗಮನವಿಟ್ಟಿದ್ದೇನೆ.

6. ನಾನು ಸ್ವಯಂಪ್ರಕಾಶ ಮತ್ತು ಶಕ್ತಿ ಸ್ವರೂಪವಾಗಿ ವಿಶ್ವದಲ್ಲಿರುವ ಅಂಧಕಾರವನ್ನು ತೊಲಗಿಸುವ ಮಾಸ್ಟರ್ ಜ್ಞಾನಸೂರ್ಯನು.

7. ನಾನು ಯಾವುದನ್ನು ತ್ಯಾಗ ಮಾಡಬೇಕಾದರೂ, ಪ್ರಾಣ ಹೋದರೂ ಪ್ರತಿಜ್ಞೆಯನ್ನು ಬಿಡದ ದೃಢ ಪ್ರತಿಜ್ಞೆಯನ್ನು ಮಾಡಿದ್ದೇನೆ.

8. ನಾನು ಮನ್ಮನಾಭವದ ವಿಧಿಯಿಂದ ಪರಿಸ್ಥಿತಿಯ ಮೇಲೆ ವಿಜಯವನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆ.

9. ದೇಹ ಅಭಿಮಾನದ "ನಾನು" ಎಂಬುದನ್ನು ಸಮಾಪ್ತಿ ಮಾಡಿ ಪ್ರತಿಜ್ಞೆಯನ್ನು ಶಕ್ತಿಶಾಲಿಯಾಗಿ ಮಾಡಿಕೊಂಡಿದ್ದೇನೆ.